# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 317 |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19-07-2024 |
| ಉತ್ತರಿಸುವ ಮಾನ್ಯ ಸಚಿವರು | : | ಕೃಷಿ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ರೈತರ ನೆರವಿಗೆ ಬರಬೇಕಾದ ಬೆಳೆ ವಿಮೆ ಬಾರದೆ ರೈತರು ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯದಲ್ಲಿ ಬೆಳೆ ವಿಮೆ ಪಡೆಯುತ್ತಿರುವ ರೈತರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2023-24ನೇ ಸಾಲಿನಲ್ಲಿ ಒಟ್ಟು 16.31 ಲಕ್ಷ ಅರ್ಹ ರೈತ ಪ್ರಸ್ತಾವನೆಗಳಿಗೆ ರೂ.1835.73 ಕೋಟಿಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲಾಗಿರುತ್ತದೆ.<br><br>ಸದರಿ ಯೋಜನೆಯಡಿ 2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಬೆಳೆ ವಿಮೆ ಪಡೆದಿರುವ ರೈತ ಪ್ರಸ್ತಾವನೆಗಳ ಸಂಖ್ಯೆ 25.03 ಲಕ್ಷಗಳು. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ) | ರಾಜ್ಯದಲ್ಲಿನ ರೈತರಿಗೆ ಶೇ.80-90 ರಷ್ಟು ಬೆಳೆ ಹಾನಿಯಾದರೂ ಬೆಳೆ ವಿಮೆ ಪರಿಹಾರ ಸಿಗುತ್ತಿಲ್ಲವೆಂದು ರೈತರು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರೈತರಿಗೆ ರಾಜ್ಯ ಸರ್ಕಾರ ಬೆಳೆ ವಿಮೆ ನೀಡದಿರಲು ಕಾರಣವೇನು; | ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯು ಇಳುವರಿ ಹಾಗೂ ಕ್ಷೇತ್ರ ಆಧಾರಿತ ಯೋಜನೆಯಾಗಿದ್ದು, ಬೆಳೆ ಕಟಾವು ಪ್ರಯೋಗಗಳ ಇಳುವರಿ ಆಧಾರದ ಮೇಲೆ ಬೆಳೆ ವಿಮೆ ಪರಿಹಾರ ಲೆಕ್ಕ ಹಾಕಲಾಗುತ್ತದೆ. ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡಿ, ತಾಳೆಯಾಗುವ ಪ್ರಸ್ತಾವನೆಗಳಿಗೆ ಮಾತ್ರ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು(Actual Yield) ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ (Threshold Yield) ಕಡಿಮೆ ಇದ್ದರೆ, ಇಳುವರಿಯ ಶೇಕಡವಾರು ಕೊರತೆಗೆ ಅನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಿ ಪಾವತಿಸಲಾಗುತ್ತಿದೆ.<br><br>2023-24ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಪರಿಷ್ಕೃತ ಮಾರ್ಗಸೂಚಿಯನ್ವಯ ಬೆಳೆ ಹಾನಿಯಾಗಿದ್ದರಿಂದ ಈ ಕೆಳಕಂಡಂತೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಅರ್ಹ ರೈತರಿಗೆ ಇತ್ಯರ್ಥಪಡಿಸಲಾಗಿರುತ್ತದೆ. |

| ಬೆಳೆ ವಿಮೆ ಪರಿಹಾರದ ವಿವರ (Add on Coverages) | ಅರ್ಹ ರೈತ ಪ್ರಸ್ತಾವನೆಗಳ ಸಂಖ್ಯೆ | ವಿಮಾ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| ಬಿತ್ತನೆ ವೈಫಲ್ಯ (Prevented Sowing) | 74887 | 5398.67 |
| ಮಧ್ಯಂತರ ಬೆಳೆ ವಿಮೆ ಪರಿಹಾರ (Mid-Season Adversity) | 707512 | 50688.47 |
| ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪ (Localized Calamity) | 37249 | 1639.96 |
| ಕೋಯ್ಲೋತ್ತರ ಬೆಳೆ ನಷ್ಟ (Post-Harvest Losses) | 690 | 171.10 |
| ಇಳುವರಿ ಕೊರತೆ ಆಧಾರದ ಮೇಲೆ (CCE) | 810842 | 125675.00 |
| **ಒಟ್ಟು** | **1631180** | **183573.20** |

| | | |
|---|---|---|
| ಇ) | ಇಲ್ಲಿಯವರೆಗೆ ಎಷ್ಟು ಜನ ರೈತರಿಗೆ ಬೆಳೆ ವಿಮೆ ತಲುಪಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | 2023-24ನೇ ಸಾಲಿನಲ್ಲಿ ಒಟ್ಟು 16.31 ಲಕ್ಷ ಅರ್ಹ ರೈತ ಪ್ರಸ್ತಾವನೆಗಳಿಗೆ ರೂ.1835.73 ಕೋಟಿಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲಾಗಿರುತ್ತದೆ.<br>(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ) |
| ಈ) | ಬೆಳೆ ವಿಮೆ ಪರಿಹಾರ ಘೋಷಿಸಲು ಇನ್ನೂ ಎಷ್ಟು ಕಾಲಾವಧಿ ಬೇಕಾಗುತ್ತದೆ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಬೆಳೆ ಕಟಾವು ಪ್ರಯೋಗಗಳ ಅಂತಿಮ ಇಳುವರಿಯ ವರದಿ ಸ್ವೀಕರಿಸಿದ ಕೂಡಲೇ ಯೋಜನೆಯ ಪರಿಷ್ಕøತ ಮಾರ್ಗಸೂಚಿಯನ್ವಯ ಬೆಳೆ ವಿಮೆ ಪರಿಹಾರವನ್ನು ಲೆಕ್ಕಾಚಾರ ಮಾಡಲಾಗಿದ್ದು, ಇದರನ್ವಯ ಅನುಷ್ಠಾನ ವಿಮಾ ಸಂಸ್ಥೆಯವರು (ಅನುಬಂಧದಲ್ಲಿ ನೀಡಿರುವಂತೆ) ಅರ್ಹ ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಿರುತ್ತಾರೆ. |

*ಕೃ ಇ 68 ಎಎಂಎಸ್ 2024*

**(ಎನ್. ಚೆಲುವರಾಯಸ್ವಾಮಿ)**
ಕೃಷಿ ಸಚಿವರು

## ಅನುಬಂಧ

### 2023 -24 ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆ ವಿಮೆ ಪಡೆದಿರುವ ಪ್ರಸ್ತಾವನೆಗಳ ಸಂಖ್ಯೆ ಹಾಗೂ ಬೆಳೆ ವಿಮೆ ಇತ್ಯರ್ಥವಾಗಿರುವ ಅರ್ಹ ರೈತ ಪ್ರಸ್ತಾವನೆಗಳ ಸಂಖ್ಯೆ ಮತ್ತು ಬೆಳೆ ವಿಮೆ ಪರಿಹಾರದ ಮೊತ್ತದ ಜಿಲ್ಲಾವಾರು ವಿವರ

| ಕ್ರ. ಸಂ. | ಜಿಲ್ಲೆ | ಬೆಳೆ ವಿಮೆ ಪಡೆದಿರುವ ಪ್ರಸ್ತಾವನೆಗಳ ಸಂಖ್ಯೆ | ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ | |
|---|---|---|---|---|
| | | | ಅರ್ಹ ರೈತ ಪ್ರಸ್ತಾವನೆಗಳ ಸಂಖ್ಯೆ | ವಿಮಾ ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಬಾಗಲಕೋಟೆ | 32833 | 16603 | 2560.74 |
| 2 | ಬಳ್ಳಾರಿ | 10647 | 1249 | 130.96 |
| 3 | ಬೆಳಗಾವಿ | 62221 | 37436 | 4909.24 |
| 4 | ಬೆಂಗಳೂರು ಗ್ರಾ. | 25595 | 8800 | 251.32 |
| 5 | ಬೆಂಗಳೂರು ನಗರ | 1190 | 123 | 1.59 |
| 6 | ಬೀದರ್ | 264216 | 102162 | 4808.97 |
| 7 | ಚಾಮರಾಜನಗರ | 20299 | 2054 | 159.05 |
| 8 | ಚಿಕ್ಕಬಳ್ಳಾಪುರ | 49405 | 40983 | 4361.79 |
| 9 | ಚಿಕ್ಕಮಗಳೂರು | 6961 | 2831 | 209.08 |
| 10 | ಚಿತ್ರದುರ್ಗ | 108916 | 86049 | 29344.43 |
| 11 | ದಕ್ಷಿಣಕನ್ನಡ | 408 | 62 | 0.83 |
| 12 | ದಾವಣಗೆರೆ | 51395 | 36117 | 10286.24 |
| 13 | ಧಾರವಾಡ | 146202 | 125689 | 11249.53 |
| 14 | ಗದಗ | 224545 | 196210 | 31514.00 |
| 15 | ಹಾಸನ | 123820 | 39487 | 2134.47 |
| 16 | ಹಾವೇರಿ | 452068 | 254401 | 13414.03 |
| 17 | ಕಲಬುರಗಿ | 169273 | 209524 | 18654.43 |
| 18 | ಕೊಡಗು | 213 | 78 | 3.62 |
| 19 | ಕೋಲಾರ | 26148 | 12833 | 522.09 |

| | | | | |
|---|---|---|---|---|
| 20 | ಕೊಪ್ಪಳ | 118992 | 75519 | 8413.58 |
| 21 | ಮಂಡ್ಯ | 137032 | 49682 | 2562.58 |
| 22 | ಮೈಸೂರು | 7405 | 2497 | 82.39 |
| 23 | ರಾಯಚೂರು | 79054 | 4298 | 782.25 |
| 24 | ರಾಮನಗರ | 12556 | 6191 | 290.35 |
| 25 | ಶಿವಮೊಗ್ಗ | 41560 | 35921 | 2394.12 |
| 26 | ತುಮಕೂರು | 104718 | 87655 | 6755.85 |
| 27 | ಉಡುಪಿ | 1458 | 430 | 1.15 |
| 28 | ಉತ್ತರಕನ್ನಡ | 51362 | 27538 | 4436.44 |
| 29 | ವಿಜಯನಗರ | 52378 | 60847 | 9173.25 |
| 30 | ವಿಜಯಪುರ | 109988 | 101382 | 13185.67 |
| 31 | ಯಾದಗಿರಿ | 10355 | 6529 | 979.16 |
| | **ಒಟ್ಟು** | **2503213** | **1631180** | **183573.20** |